**ಅಸಲು ದಾವ ಸಂಖ್ಯೆಃ 463/2018**
**ಪಿ.ಡಬ್ಲೂ -1**

ದಿಃ 22.09.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.
**ಮುಂದುವರೆದ ಪಾಟೀ ಸವಾಲು ಶ್ರೀ ವಿ ಬಿ ಎಂ ರವರಿಂದಃ-**

(ಸಾಕ್ಷಿಗೆ ಕನ್ನಡ ಭಾಷೆ ಬರುವುದಿಲ್ಲ ಎಂದು ವಕೀಲರು ಹೇಳಿದ ಕಾರಣ ಹಿಂದಿ (ಮರಾಠಿ) ಭಾಷೆ ಮತ್ತು ಕನ್ನಡ ಭಾಷೆ ತಿಳಿದಿದೆ ಎಂದು ಹೇಳಿರುವ ವಕೀಲರಾದ ಶ್ರೀಮತಿ ಎಸ್ ಎಂ ಹೆಚ್ ರವರನ್ನು ತರ್ಜುಮೆದಾರರಾಗಿ ನೇಮಕ ಮಾಡಿದ್ದು ಸದರಿಯವರು ವಾದಿಯ ಪರ ವಕೀಲರು ಕನ್ನಡದಲ್ಲಿ ಕೇಳಿದ ಪ್ರಶ್ನೆಗಳನ್ನು ಮರಾಠಿಗೆ ತರ್ಜುಮೆ ಮಾಡಿ ಸಾಕ್ಷಿಗೆ ಹೇಳಲು, ಸಾಕ್ಷಿಯು ಮರಾಠಿಯಲ್ಲಿ ಹೇಳಿದ ಉತ್ತರವನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಹೇಳಲು ಒಪ್ಪಿಕೊಂಡಿರುತ್ತಾರೆ. ರೂ.200/- ನ್ನು ತರ್ಜುಮೆದಾರರ ಫೀ ಎಂದು ನಿಗದಿಪಡಿಸಿದ್ದು ವಾದಿಯು ಸದರಿ ಫೀಯನ್ನು ನೀಡಲು ಆದೇಶಿಸಲಾಗಿದೆ.)

1. ನಾನು ಕಂಗ್ರಾಳಿ ಕೆ ಎಚ್ ಗ್ರಾಮಪಂಚಾಯತಿಗೆ ಸರ್ವೇ ನಂಬರ 22/2 ಆಸ್ತಿಯ ಗ್ರಾಮಪಂಚಾಯತಿ ಆಸ್ತಿ ರಜಿಸ್ಟರನಲ್ಲಿ ನನ್ನ ಹಾಗೂ ನನ್ನ ಸಹೋದರನ ಹೆಸರನ್ನು ನೋಂದ ಮಾಡಲು ಅರ್ಜಿ ಸಲ್ಲಿಸಿದ್ದೇನು ಎಂದರೆ ಸರಿ. ಪಿ ಡಿ ಓ ಗ್ರಾಮಪಂಚಾಯತಿ ರವರು
ನಿಶಾನೆ ಪಿ 21 ರ ನ್ವಯ ಸರ್ವೇ ನಂಬರ 22/2 ನ್ನು ಗ್ರಾಮಪಂಚಾಯತ ಆಸ್ತಿ ರಜಿಸ್ಟರನಲ್ಲಿ ನನ್ನ ಹೆಸರು ಹಾಗೂ ನನ್ನ ಸಹೋದರನ ಹೆಸರನ್ನು ನೋಂದ ಮಾಡಲು ಬರುವುದಿಲ್ಲ ಎಂದು ಉತ್ತರ ನೀಡಿದ್ದರು ಎಂದರೆ ಸರಿಯಲ್ಲ. ಸರ್ವೇ ನಂಬರ 22/2 ರ ಗ್ರಾಮಪಂಚಾಯತಿ ಆಸ್ತಿ ರಜಿಸ್ಟರನಲ್ಲಿ ಗ್ರಾಮಪಂಚಾಯತಿ ಆಸ್ತಿ ನಂಬರ 1/ಎ ಎಂದು ನೀಡಿದ್ದು ಅದು ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ಕಂಗ್ರಾಳಿ ಕೆ ಎಚ್ ಗ್ರಾಮಪಂಚಾಯತ ರಜಿಸ್ಟರನಲ್ಲಿ ಸರ್ವೇ

ನಂಬರ 22/2 ರಲ್ಲಿ ನನ್ನ ಹೆಸರು ದಾಖಲಿದೆ ಎಂದು ತೋರಿಸಲು ನಾನು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ಮುಂದುವರೆದು ಹೇಳುತ್ತೇನೆ ನಾನು ಸದರಿ ದಾಖಲೆಯಲ್ಲಿ ನನ್ನ ಹೆಸರನ್ನು ಇನ್ನು ಮುಂದೆ ದಾಖಲಿಸಿಕೊಳ್ಳುವವನು ಇದ್ದೇನೆ ಹಾಗೂ ರೇವಿನ್ಯೂ ದಾಖಲೆಯಲ್ಲಿ ನನ್ನ ಹೆಸರು ದಾಖಲಾಗಿರುತ್ತದೆ ಹಾಗೂ ಕರ ರಶೀದಿಗಳು ಇರುತ್ತೇವೆ. ಸದರಿ ಕರ ರಶೀದಿಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿ. ದಾವಾ ಆಸ್ತಿಯು ಸಂಪೂರ್ಣ ಪ್ರತಿವಾದಿಯರ ಹೆಸರಿನಲ್ಲಿದ್ದು ಅವರು ಅದರಲ್ಲಿ ಮನೆ ಕಟ್ಟಿ ವಾಸಿಸುತ್ತಿದ್ದಾರೆ ಎಂದರೆ ಸರಿಯಲ್ಲ.

2. ನನ್ನ ಅಜ್ಜ ಕಲ್ಲಪ್ಪಾ ಮಹಾದೇವ ಪಾಟೀಲ ರವರು ಯಾವಾಗ ಮೃತರಾದರು ಎಂದು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. ಸದರಿಯವರು ಸುಮಾರು 25 ವರ್ಷಗಳ ಹಿಂದೆ ಮೃತರಾಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿಯವರು ಸ್ವಾಭಾವಿಕವಾಗಿ ಮನೆಯಲ್ಲಿ ಮೃತರಾಗಿರುತ್ತಾರೆ. ನನ್ನ ಅಜ್ಜ ಮೃತರಾಗುವ ಕಾಲಕ್ಕೆ ನನ್ನ ತಂದೆ ಜೀವಂತ ಇದ್ದರೂ. ನನ್ನ ಅಜ್ಜ ಮೃತರಾಗಿರುವ ಕುರಿತಾಗಿ ಗ್ರಾಮಪಂಚಾಯತಿಗೆ ಹಾಗೂ ತಹಶೀಲ್ದಾರ ಕಚೇರಿಗೆ ನನ್ನ ತಂದೆ ವಿಷಯ ತಿಳಿಸಿರಬಹುದು ಆದರೆ ಅದು ನನಗೆ ಗೊತ್ತಿಲ್ಲ. ನಾನು ಅಥವಾ ನನ್ನ ಸಹೋದರ ನನ್ನ ಅಜ್ಜ ಮೃತರಾಗಿದ್ದಾರೆ ಎಂದು ಗ್ರಾಮಪಂಚಾಯತಿಗೆ ಅಥವಾ ತಹಶೀಲ್ದಾರ ಕಚೇರಿಗಾಗಲಿ ವಿಷಯ ತಿಳಿಸಿಲ್ಲ.

ಪ್ರಶ್ನೆಃ ನಿಮ್ಮ ಅಜ್ಜ ಮೃತರಾದ ನಂತರ ಅವರ ಹೆಸರಿನಲ್ಲಿರುವ ಆಸ್ತಿಯನ್ನು ತನ್ನ ಹೆಸರಿಗೆ ವಾರಸಾ ನಾತೆಯಿಂದ ದಾಖಲಿಸಿಕೊಳ್ಳಲು ನಿಮ್ಮ ತಂದೆ ವಾರಸಾ ಎಂಟ್ರಿಗಾಗಿ ಅರ್ಜಿ ನೀಡಿರುತ್ತಾರೆಯೇ ?

ಉತ್ತರಃ ನನ್ನ ಅಜ್ಜ ಜೀವಂತ ಇರುವಾಗಲೇ ನನ್ನ ತಂದೆಯ ಹೆಸರನ್ನು ನನ್ನ ಅಜ್ಜನ

ಹೆಸರಿನಲ್ಲಿದ್ದ ಆಸ್ತಿಗಳ ದಾಖಲೆಯಲ್ಲಿ ದಾಖಲಿಸಲು ನನ್ನ ಅಜ್ಜನವರೇ ವರದಿ ನೀಡಿರುತ್ತಾರೆ.

3. ಈಗ ನಾನು ನೋಡುತ್ತಿರುವ ದಾಖಲೆ ನನ್ನ ಅಜ್ಜನ ಮರಣ ಉತಾರ ಆಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಶಾನೆ ಡಿ 4 ಎಂದು ಗುರುತಿಸಲಾಯಿತು. ನನ್ನ ಅಜ್ಜನ ಮರಣ ದಿನಾಂಕ ಅವರ ಮರಣ ರಜಿಸ್ಟರನಲ್ಲಿ ನಮೂದಾಗಿರುವ ದಿನಾಂಕವನ್ನು ನನಗೆ ಹೇಳಲು ಬರುವುದಿಲ್ಲ.

**ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**ಸಹಿ/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**
**ಬೆಳಗಾವಿ.**